# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 279 (350)

ಸದಸ್ಯರ ಹೆಸರು : ಡಾ. ವೈ.ಎ. ನಾರಾಯಣ ಸ್ವಾಮಿ (ಶಿಕ್ಷಕರ ಕ್ಷೇತ್ರ),

ಉತ್ತರಿಸುವ ದಿನಾಂಕ : 07.07.2023

ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಜಾರಿ ಇರುವ "ಗ್ರಾಮೀಣ ಭಾರತಕ್ಕೆ ಸಸ್ಯಾಧಾರಿತ ವಿದ್ಯುತ್" ಯೋಜನೆಯ ನಿರ್ವಹಣೆಯನ್ನು ಯಾವ ಮಂಡಳಿಗಳಿಗೆ ವಹಿಸಲಾಗಿದೆ: | ರಾಜ್ಯದಲ್ಲಿ ಜಾರಿ ಇರುವ "ಗ್ರಾಮೀಣ ಭಾರತಕ್ಕೆ ಸಸ್ಯಾಧಾರಿತ ವಿದ್ಯುತ್" (Biomass Energy for Rural India - "BERI") ಯೋಜನೆಯನ್ನು ದಿನಾಂಕ.31.01.2014 ರಿಂದ ಜಾರಿಗೆ ಬರುವಂತೆ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಗೆ ವಹಿಸಲಾಗಿದೆ. |
| (ಆ) | ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯು ಈ ಯೋಜನೆಯ ಪುನರರಾಂಭಕ್ಕೆ ತಜ್ಞರ ಸಮಿತಿಯನ್ನು ರಚಿಸಲಾಗಿದೆಯೇ; ಹಾಗಿದ್ದಲ್ಲಿ, ಈ ತಜ್ಞರ ಸಮಿತಿಯನ್ನು ರಚಿಸಿರುವ ಉದ್ದೇಶವೇನು; ಅದರ ಕಾರ್ಯವ್ಯಾಪ್ತಿ ಏನು; | ಹೌದು.<br><br>ದಿನಾಂಕ:26.03.2014 ರಂದು ಜರುಗಿದ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ 11ನೇ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಬೆರಿ ಯೋಜನೆಯ ಪುನರಾರಂಭಕ್ಕೆ ಶ್ರೀ ವೈ. ಬಿ. ರಾಮಕೃಷ್ಣ, ಮಂಡಳಿಯ ಹಿಂದಿನ ಅಧ್ಯಕ್ಷರು ಅವರ ಅಧ್ಯಕ್ಷತೆಯಲ್ಲಿ ತಜ್ಞರ ಉಪ ಸಮಿತಿಯನ್ನು ರಚಿಸಲಾಗಿತ್ತು. ಈ ಉಪ ಸಮಿತಿಯಲ್ಲಿ ಪ್ರೊ. ಉಡಿಪಿ ಶ್ರೀನಿವಾಸ, ಭಾರತೀಯ ವಿಜ್ಞಾನ ಮಂದಿರ(ಐ.ಐ.ಎಸ್.ಸಿ) ಹಾಗೂ ಮಂಡಳಿಯ ಕಾರ್ಯಕಾರಿ ಸಮಿತಿ ಸಹ ಸದಸ್ಯರು, ಶ್ರೀ ಕೆ.ಕ್ರಿಷನ್, ಮಂಡಳಿಯ ಕಾರ್ಯಕಾರಿ ಸಮಿತಿ ಸಹ ಸದಸ್ಯರು, ನಿರ್ದೇಶಕರು, (ಗ್ರಾಮೀಣ ಇಂಧನ) ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ ಸದಸ್ಯರುಗಳು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಇವರು ಉಪ ಸಮಿತಿಗೆ ಸದಸ್ಯ ಕಾರ್ಯದರ್ಶಿಗಳಾಗಿದ್ದರು. ಶ್ರೀ ದಿವಾಕರ್ ರಾವ್, ಮಂಡಳಿಯ ಕಾರ್ಯಕಾರಿ ಸಮಿತಿ ಸಹ ಸದಸ್ಯರು ಹಾಗೂ ಪ್ರೊ. ದಾಸಪ್ಪ, ಸಿ.ಜಿ.ಪಿ.ಎಲ್. ಭಾರತೀಯ ವಿಜ್ಞಾನ ಮಂದಿರ (ಐ.ಐ.ಎಸ್.ಸಿ) – ಆಹ್ವಾನಿತರಾಗಿದ್ದರು.<br><br>**ಉಪ ಸಮಿತಿಯ ಉದ್ದೇಶಗಳು :**<br>1. ಉಪ ಸಮಿತಿಯು ಬೆರಿ ಯೋಜನೆಯನ್ನು ಪುನಶ್ಚೇತನಗೊಳಿಸಲು ಕೈಗೊಳ್ಳಬೇಕಾದ ಕಾರ್ಯಯೋಜನೆ ರೂಪಿಸಿ, ಅಗತ್ಯ ಸಲಹೆಗಳೊಂದಿಗೆ ವರದಿಯನ್ನು ಸಿದ್ಧಗೊಳಿಸುವುದು. |

| | | |
|---|---|---|
| | | 2. ಬೆರಿ ಯೋಜನೆಗೆ ಸಂಬಂಧಿಸಿದ ತಜ್ಞರೊಂದಿಗೆ ಚರ್ಚಿಸಿ ಯೋಜನೆಯ ತಾಂತ್ರಿಕತೆ, ಆರ್ಥಿಕ ಹಾಗೂ ಸಂಪನ್ಮೂಲ ಕ್ರೋಢೀಕರಣ ಕುರಿತಂತೆ ಯೋಜನೆಯನ್ನು ಪುನಶ್ಚೇತನಗೊಳಿಸುವ ಕುರಿತು ವರದಿಯನ್ನು ಸಲ್ಲಿಸುವುದು.<br><br>**ಕಾರ್ಯವ್ಯಾಪ್ತಿ :**<br>ಬೆರಿ ಯೋಜನೆಯ ಮೂರು ಘಟಕಗಳಾದ ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕಿನ ಕಬ್ಬಿಗೆರೆ, ಮಧುಗಿರಿ ತಾಲ್ಲೂಕಿನ ಬೋರಾಗುಂಟೆ ಮತ್ತು ಸೀಬಿನಯ್ಯನಪಾಳ್ಯ. |
| (ಇ) | ಆ ಸಮಿತಿಗೆ ವರದಿ ಸಲ್ಲಿಸಲು ಕಾಲಮಿತಿಯೇನಾದರೂ ವಿಧಿಸಲಾಗಿದೆಯೇ; ಹಾಗಿದ್ದಲ್ಲಿ ವರದಿ ಸಲ್ಲಿಸುವ ಬಗ್ಗೆ ಸಮಿತಿ ಕೈಗೊಂಡಿರುವ ಕ್ರಮಗಳೇನು (ವಿವರ ನೀಡುವುದು) | ಹೌದು.<br>ಮಂಡಳಿಯು ಬೆರಿ ಯೋಜನೆ ಪುನಶ್ಚೇತನ ಕುರಿತು ವರದಿ ಸಲ್ಲಿಸಲು ಉಪ ಸಮಿತಿಗೆ ಮೂರು ತಿಂಗಳ ಕಾಲಾವಧಿಯನ್ನು ನಿಗಧಿಗೊಳಿಸಿತ್ತು. ಉಪ ಸಮಿತಿಯು ವರದಿಯನ್ನು ಸಿದ್ಧಗೊಳಿಸಿ ಮಂಡಳಿಗೆ ನವೆಂಬರ್ 2014 ರಲ್ಲಿ ಸಲ್ಲಿಸಿದೆ. |
| (ಈ) | ಸರ್ಕಾರದ ಮಹತ್ತರವಾದ ಈ ಯೊಜನೆಯ ಅನುಷ್ಠಾನಕ್ಕಾಗಿ ತುಮಕೂರು ಜಿಲ್ಲೆಯಲ್ಲಿ ಕೋಟ್ಯಾಂತರ ರೂಪಾಯಿ ಹಣ ಹೂಡಿಕೆ ಮಾಡಿ ಈ ಯೋಜನೆಯನ್ನು ಸ್ಥಗಿತಗೊಳಿಸಲು ಕಾರಣಗಳೇನು? (ವಿವರ ನೀಡುವುದು) | 1) ಬಯೋಮಾಸ್ ಎನರ್ಜಿ ಫಾರ್ ರೂರಲ್ ಇಂಡಿಯಾ (BERI) ಯೋಜನೆಯು UNDP-GEF, ICEF, GOI ಮತ್ತು GOK ಇವುಗಳ ಹಣಕಾಸಿನ ನೆರವಿನಿಂದ ಏಪ್ರಿಲ್–2001ರಲ್ಲಿ ತುಮಕೂರು ಜಿಲ್ಲೆಯಲ್ಲಿ ಅಸ್ತಿತ್ವಕ್ಕೆ ಬಂದಿರುತ್ತದೆ. ಯೋಜನೆಯಡಿ ಬಯೋಮಾಸ್ (Woody Biomass) ನಿಂದ ವಿದ್ಯುತ್ ಉತ್ಪಾದಿಸಿ, ಗ್ರಾಮೀಣ ಪ್ರದೇಶಗಳ ನಿತ್ಯದ ಅವಶ್ಯಕತೆಗಳಿಗೆ ವಿದ್ಯುತ್ ಪೂರೈಕೆ ಮಾಡುವ ಆಶಯ ಹೊಂದಿತ್ತು.<br><br>2) 'ಬೆರಿ' ಯೋಜನೆಯಡಿ ಮೂರು ಪವರ್ ಪ್ಲಾಂಟ್ (ಕಬ್ಬಿಗೆರೆ ಕೊರಟಗೆರೆ ತಾಲ್ಲೂಕು, ಬೋರಿಗುಂಟೆ ಹಾಗೂ ಸೀಬಿನಯ್ಯನಪಾಳ್ಯ ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ) ಗಳನ್ನು ಸ್ಥಾಪಿಸಿದ್ದು, ಕಬ್ಬಿಗೆರೆ ಘಟಕವನ್ನು ಚಾಲನೆಮಾಡಿ ಸುಮಾರು 15 ಲಕ್ಷ ಯೂನಿಟ್ ಸಸ್ಯಾಧಾರಿತ ವಿದ್ಯುತ್ ಉತ್ಪಾದಿಸಿ ಬೆಸ್ಕಾಂ ಗ್ರಿಡ್‌ಗೆ ಹರಿಸಲಾಗಿದೆ. ಬೋರೆಗುಂಟೆ ಮತ್ತು ಸೀಬಿನಯ್ಯನಪಾಳ್ಯದಲ್ಲಿರುವ ಘಟಕಗಳನ್ನು ತಾಂತ್ರಿಕ ಕಾರಣ / ಅನುದಾನದ ಕೊರತೆಯಿಂದ ಚಾಲನೆ ಮಾಡಿರುವುದಿಲ್ಲ.<br><br>3) ಬೆರಿ ಯೋಜನೆಯ ಘಟಕಗಳಲ್ಲಿ ವಿದ್ಯುತ್ ಉತ್ಪಾದನಾ ವೆಚ್ಚ ಪ್ರತಿ ಯುನಿಟ್‌ಗೆ ರೂ.8.50 ಆಗಲಿದ್ದು ವಿದ್ಯುತ್ ಖರೀದಿ ದರ ರೂ.2.85 ಇರುತ್ತದೆ (Power Purchase Agreement – PPA). |

| | | |
|---|---|---|
| | | 4) ಬೆರಿ ಯೋಜನೆಯ ಯಂತ್ರೋಪಕರಣಗಳ ಪೂರೈಕೆದಾರರು ಕೇವಲ ಒಂದು ಘಟಕಕ್ಕೆ ಮಾತ್ರ ವಿದ್ಯುತ್ ಉತ್ಪಾದನೆಯನ್ನು ಆರಂಭಿಸಿ, ಉಳಿದ ಎರಡು ಘಟಕಗಳನ್ನು ತಾಂತ್ರಿಕ ಕಾರಣಗಳಿಂದ ವಿದ್ಯುತ್ ಉತ್ಪಾದನೆಯನ್ನು ಆರಂಭಿಸಲು ಸಾಧ್ಯವಾಗದೆ ಹಾಗೆಯೇ ತಟಸ್ಥಗೊಳಿಸಲಾಗಿತ್ತು.<br><br>5) ಬೆರಿ ಯೋಜನೆಯ ವಿದ್ಯುತ್ ಉತ್ಪಾದನೆಗೆ ಅಗತ್ಯ ಮರದ ಕಟ್ಟಿಗೆಯ ನಿರಂತರ ಪೂರೈಕೆಯು ಸಾಧ್ಯವಾಗದಿರುವುದು ಹಾಗೂ ಉತ್ಪಾದನಾ ವೆಚ್ಚದಲ್ಲಿ ಕಚ್ಚಾವಸ್ತುಗಳ ದರವು ಪ್ರಮುಖ ಪಾತ್ರವಹಿಸಿರುವುದು ಯೋಜನೆಯ ಸ್ಥಗಿತಕ್ಕೆ ಕಾರಣವಾಗಿದೆ. |
| (ಉ) | ಈ ಯೋಜನೆಯನ್ನು ಪುನರಾರಂಭಿಸಿದ ನಂತರ ರಾಜ್ಯದ ಎಲ್ಲಾ ಭಾಗಗಳಿಗೂ ವಿಸ್ತರಿಸುವ ಕುರಿತು ಸರ್ಕಾರ ಚಿಂತನೆ ನಡೆಸಿದೆಯೇ; ಹಾಗಿದ್ದಲ್ಲಿ ಈ ಯೋಜನೆಯನ್ನು ಯಾವ ಯಾವ ಜಿಲ್ಲೆಗಳಿಗೆ ಮತ್ತು ಯಾವಾಗ ವಿಸ್ತರಿಸಲಾಗುವುದು; ಈ ಕುರಿತು ಸರ್ಕಾರದ ನಿಲುವೇನು? | 'ಬೆರಿ' ಯೋಜನೆಯು 2012 ರಿಂದ ಸಂಪೂರ್ಣವಾಗಿ ಸ್ಥಗಿತಗೊಂಡಿದ್ದು ವಿದ್ಯುತ್ ಉತ್ಪಾದನೆಯನ್ನು ಮಾಡಿರುವುದಿಲ್ಲ. ಈ ಯೋಜನೆಯ ಎಲ್ಲಾ ಯಂತ್ರೋಪಕರಣಗಳು ಸಂಪೂರ್ಣವಾಗಿ ಶಿಥಿಲಗೊಂಡು ಪುನರಾರಂಭಕ್ಕೆ ಯೋಗ್ಯವಾಗಿರುವುದಿಲ್ಲ. ಹಾಗೆಯೇ ಈ ಘಟಕಗಳಲ್ಲಿ ಉತ್ಪಾದಿಸಲಾಗುವ ವಿದ್ಯುತ್ ಯುನಿಟ್ ದರವು ಇತರ ಮೂಲಗಳಿಂದ ಉತ್ಪಾದಿಸಲಾಗುವ ವಿದ್ಯುತ್ ದರಕ್ಕಿಂತ ಹೆಚ್ಚಿನದಾಗಿರುವುದರಿಂದ ಸರ್ಕಾರವು ರಾಜ್ಯದ ಎಲ್ಲಾ ಭಾಗಗಳಿಗೂ ವಿಸ್ತರಿಸುವ ಕುರಿತು ಚಿಂತನೆ ನಡೆಸಿರುವುದಿಲ್ಲ. |

**ಸಂಖ್ಯೆ: ಗ್ರಾಅಪಂರಾ 233 ಜಿಪಸ 2023**

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಹಾಗೂ ಮಾಹಿತಿ ಮತ್ತು ಜೈವಿಕ
ತಂತ್ರಜ್ಞಾನ ಸಚಿವರು.